ಸಮುದ್ರ ಮಟ್ಟದಿಂದ ಸುಮಾರು 7000 ಅಡಿ ಎತ್ತರದಲ್ಲಿರುವ ಡಾರ್ಜಿಲಿಂಗ್ ಗಿರಿಧಾಮ ಪಶ್ಚಿಮ ಬಂಗಾಳದ ಪ್ರವಾಸಿ ಆಕರ್ಷಣೆಗಳಲ್ಲೊಂದು. ಅಲ್ಲಿ ವರ್ಷ ಪೂರ್ತಿ ತಂಪಾದ ವಾತಾವರಣ. ಆ ಕಾರಣದಿಂದಾಗಿಯೇ ಮೈಮನಗಳಿಗೆ ತಂಪು ಬಯಸಿ ಬರುವ ರಸಿಕರಿಗೆ ಡಾರ್ಜಿಲಿಂಗ್ ಅಚ್ಚುಮೆಚ್ಚು.

ಹಿಂದೊಮ್ಮೆ ಸಿಕ್ಕಿಂ ರಾಜನ ಅಧೀನದಲ್ಲಿದ್ದ ಡಾರ್ಜಿಲಿಂಗ್ ಅನ್ನು ಪ್ರವಾಸಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಿದ್ದು ಬ್ರಿಟಿಷರು. ರಾಜನಿಂದ ತಮ್ಮ ವಶಕ್ಕೆ ಈ ಪ್ರದೇಶವನ್ನು ಪಡೆದ ಅವರು, ಡಾರ್ಜಿಲಿಂಗ್ ಅನ್ನು ಗಿರಿಧಾಮವನ್ನಾಗಿ ಜನಪ್ರಿಯಗೊಳಿಸಿದರು. ಅಲ್ಲಿನ ವಾತಾವರಣಕ್ಕೆ ಹೊಂದುವ ಚಹಾ ತೋಟಗಳನ್ನು ಅಭಿವೃದ್ಧಿಪಡಿಸಿ, ಡಾರ್ಜಿಲಿಂಗ್ ಚಹರೆಯನ್ನೇ ಬದಲಿಸಿದರು.

ಪ್ರಸ್ತುತ ಡಾರ್ಜಿಲಿಂಗ್ ಜನಜಂಗುಳಿಯಿಂದ ಕೂಡಿದ, ಪ್ರವಾಸಿಗರ ಕಲರವದಿಂದ ತುಂಬಿದ ನಗರ. ಮೌನದ ನಿರೀಕ್ಷೆಯಲ್ಲಿ ಬರುವ ಪ್ರವಾಸಿಗರಿಗೆ ಅಲ್ಲಿನ ಜನದಟ್ಟಣೆ ಕೊಂಚ ನಿರಾಶೆ ಮೂಡಿಸಿದರೂ ಆಶ್ಚರ್ಯವಿಲ್ಲ. ಹಾಗೆ ನಿರಾಶೆಗೊಳ್ಳುವವರು ಚುನ್ನು ಸಮ್ಮರ್ ಜಲಪಾತವನ್ನು ಹುಡುಕಿಕೊಂಡು ಹೋಗುತ್ತಾರೆ.

ಡಾರ್ಜಿಲಿಂಗ್‌ನಿಂದ ಸುಮಾರು 10 ಕಿ.ಮೀ. ದೂರದಲ್ಲಿರುವ ಈ ಜಲಪಾತ ನೋಡುಗರನ್ನು ಮಂತ್ರಮುಗ್ಧಗೊಳಿಸುವಂತಿದೆ. ರಸ್ತೆಯಿಂದ ಕಣಿವೆಯತ್ತ ಸಾಗುವಾಗ ಚಹಾ ತೋಟಗಳು ಸೊಬಗು, ಕಣಿವೆಯ ರಮಣೀಯ ಸುಂದರ ಚಿತ್ರಣ ಮನಸ್ಸಿಗೆ ಮುದ ನೀಡುವಂತಹದ್ದು.

ಚುನ್ನು ಸಮ್ಮರ್ ಜಲಪಾತವನ್ನು ಹೊಂದಿರುವ ಪಾರ್ಕ್ ಹಲವು ವಿಶೇಷಗಳನ್ನು ಹೊಂದಿದೆ. ಸುಮಾರು ನಾಲ್ಕು ಹಂತಗಳಲ್ಲಿ ಈ ಜಲಧಾರೆ ನೆಲಕ್ಕೆ ಧುಮ್ಮಿಕ್ಕುತ್ತದೆ. ಅಲ್ಲಿಂದ ಮೇಲೆ ಸಾಗಿದರೆ ಜಲಪಾತದ ವಿವಿಧ ಹಂತಗಳು ಹಾಗೂ ಕಣಿವೆಯ ಸುಂದರ ದೃಶ್ಯಗಳು ಕಾಣಿಸುತ್ತವೆ. ಅಲ್ಲೊಂದು 'ರಾಕ್ ಗಾರ್ಡನ್' ಅನ್ನು ಪ್ರವಾಸೋದ್ಯಮ ಇಲಾಖೆ ಅಭಿವೃದ್ಧಿಪಡಿಸಿದೆ.

ಹಿಮಾಲಯದ ಮಡಿಲಿನ ಹೂವುಗಳು, ಅಲ್ಲಲ್ಲಿ ನಿರ್ಮಿಸಿದ ಕೃತಕ ನಿರ್ಮಾಣಗಳು, ನಿಸರ್ಗಸಹಜ ಬಂಡೆಯೇ ಕಮಾನಿನಂತೆ ಕಾಣುವ ಸುಂದರ ಚಿತ್ರಣ ಅಲ್ಲಿದೆ. ಕೆರೆಯಲ್ಲಿ ದೋಣಿ ವಿಹಾರಕ್ಕೆ ಅವಕಾಶವಿದೆ.

ಬೆಂಗಳೂರಿನಿಂದ ವಿಮಾನದ ಮೂಲಕ ಬಾಗ್ಡೋದರ–ಡಾರ್ಜಿಲಿಂಗ್ ತಲುಪಬಹುದು. ರೈಲಿನ ಮೂಲಕ ಹೋಗುವವರು ನ್ಯೂ ಜಲಪೈಗುರಿ–ಡಾರ್ಜಿಲಿಂಗ್ ತಲುಪಬಹುದು. ಡಾರ್ಜಿಲಿಂಗ್‌ನ ರೈಲಿನ ಪ್ರಯಾಣ ವಿಶ್ವಪಾರಂಪರಿಕ ತಾಣಗಳ ಪಟ್ಟಿಯಲ್ಲಿದೆ. ಸಮಯವಿರುವವರು ರೈಲ್ವೆ ಪ್ರಯಾಣವನ್ನು ಆಯ್ದುಕೊಳ್ಳುವುದೇ ಉತ್ತಮ. ■

